ಕಛೇರಿ : +91 80 2287 4039
+91 80 2235 4085
ಫ್ಯಾಕ್ಸ್ : +9180 2228 5591
ಇ-ಮೇಲ್ : com-hfws@karnataka.gov.in

# ಆಯುಕ್ತಾಲಯ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ದಿನಾಂಕ: 31/03/2020

### ಆರೋಗ್ಯ ಸೂಚನೆ

ವಿಷಯ: ಎಲ್ಲರೂ ಮಾಸ್ಕ್ (ಮುಖಗವಸು) ಧರಿಸಬೇಕಾದ ಅಗತ್ಯವಿಲ್ಲದಿರುವ ಕುರಿತು

1. ರಾಜ್ಯದಲ್ಲಿರುವ ವ್ಯಾಪಾರಿ ಮಳಿಗೆಗಳು, ಅಂಗಡಿ ಮುಂಗಟ್ಟುಗಳು ವಾಣಿಜ್ಯ ಸಂಸ್ಥೆಗಳ ಆಡಳಿತ ವರ್ಗ/ ವ್ಯವಸ್ಥಾಪಕರು ಮಾಸ್ಕ್ ಧರಿಸುವಂತೆ ಜನಸಾಮಾನ್ಯರನ್ನು ಒತ್ತಾಯಿಸುತ್ತಿರುವುದಾಗಿ ತಿಳಿದು ಬಂದಿರುತ್ತದೆ.
2. ಯಾರು ಮಾಸ್ಕ್ ಧರಿಸಬೇಕು ಎನ್ನುವ ಬಗ್ಗೆ ಅನೇಕ ಸುತ್ತೋಲೆ ಮತ್ತು ಸೂಚನೆಗಳ ಮೂಲಕ ಸರ್ಕಾರ ಈಗಾಗಲೇ ಸ್ಪಷ್ಟನೆ ನೀಡಿದೆ.
3. ಹಾಗಾಗಿ ಎಲ್ಲಾ ಸಂಸ್ಥೆಗಳಿಗೆ ಮತ್ತು ವ್ಯಕ್ತಿಗಳಿಗೆ ಈ ಮೂಲಕ ಸ್ಪಷ್ಟಪಡಿಸುವುದೇನೆಂದರೆ, **ಪ್ರತಿಯೊಬ್ಬರೂ ಮಾಸ್ಕ್ ಧರಿಸಬೇಕು ಎನ್ನುವ ನಿಯಮ ಇರುವುದಿಲ್ಲ.**
4. ಒಬ್ಬ ವ್ಯಕ್ತಿಯು ಯಾವಾಗ ಮಾಸ್ಕ್ ಧರಿಸಬೇಕಾದ ಅಗತ್ಯವಿದೆ ಎಂದರೆ:

i) ಆತ/ಆಕೆಗೆ ಶೀತ ಅಥವಾ ಕೆಮ್ಮು ಅಥವಾ ಜ್ವರ ಅಥವಾ ಉಸಿರಾಟದ ತೊಂದರೆಯಂತಹ ಯಾವುದೇ ರೋಗಲಕ್ಷಣಗಳಿದ್ದರೆ.

ii) ವ್ಯಕ್ತಿಯು ಶಂಕಿತ/ಖಚಿತ ಕೋವಿಡ್-19 ವ್ಯಕ್ತಿಯ ನಿಗಾ ವಹಿಸುತ್ತಿರುವ ಸಂದರ್ಭಗಳಲ್ಲಿ.

iii) ಉಸಿರಾಟದ ತೊಂದರೆ ಇರುವಂತಹ ರೋಗಿಗಳ ಸೇವೆಯಲ್ಲಿ ತೊಡಗಿಕೊಂಡಿರುವ ಆರೋಗ್ಯ ಕಾರ್ಯಕರ್ತರು.

5. ಬಳಸಬೇಕಾದ ಮಾಸ್ಕ್ ಮಾದರಿಗಳು ಯಾವುವೆಂದರೆ: ಕೋವಿಡ್ ಶಂಕಿತರು ಅಥವಾ ಕೋವಿಡ್ ರೋಗಿಗಳ ಚಿಕಿತ್ಸೆಯಲ್ಲಿ ತೊಡಗಿಸಿಕೊಂಡಿರುವವರು ಅಥವಾ ರೋಗಿಗಳ ನಿಗಾ ವಹಿಸುತ್ತಿರುವವರು ಎನ್-95 ಮಾಸ್ಕ್ ಧರಿಸಬೇಕು ಮತ್ತು ರೋಗಿಗಳ ಚಿಕಿತ್ಸೆ/ಆರೈಕೆಯಿಂದ ಹೊರತುಪಡಿಸಿದ ಉಳಿದವರು ಮೂರು ಪದರಗಳ ಸರ್ಜಿಕಲ್ ಮಾಸ್ಕ್ ಧರಿಸಬಹುದು.

31.3.20

ಆಯುಕ್ತರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು.